**ಸಾಕ್ಷಿಯನ್ನು ದಿಃ28.06.2025 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ ಆರ್.ಸಿ ವಕೀಲರಿಂದಃ–**

ಈ ಕೇಸಿನ 3 ನೇ ಪ್ರತಿವಾದಿ ಈಶ್ವರ ನನ್ನ ಅಣ್ಣ. ನನ್ನ ವಿಧ್ಯಾಭ್ಯಾಸ ಬಿ.ಕಾಂ, ಎಲ್ ಎಲ್ ಬಿ. ಎಂ.ಬಿ.ಎ ಮತ್ತು ಎಂ.ಎಸ್. ಕಂಪ್ಯೂಟರ್ ಸೈನ್ಸ್ ಬಿ.ಕಾಂ, ಎಲ್ ಎಲ್.ಬಿ ಯನ್ನು ಮೈಸೂರು ಯುನಿವರ್ಸ್ಗಟಿಯಲ್ಲಿ, ಎಂ.ಬಿ.ಎ ಅನ್ನು ಯು.ಎಸ್ ನಲ್ಲಿ ಮಾಡಿರುತ್ತೇನೆ. ಮೂಲತಃ ನಾನು ಮೈಸೂರಿನವನು. ವಿದೇಶದಲ್ಲಿ ವಿಧ್ಯಾಭ್ಯಾಸವಲ್ಲದೆ ಕೆಲಸವನ್ನು ಮಾಡುತ್ತಿದ್ದೆ. ವಿದೇಶದಲ್ಲಿ 1978 ರಲ್ಲಿ ಹೋಗಿ ವಿಧ್ಯಾಭ್ಯಾಸದ ಜೊತೆಗೆ ಕೆಲಸ ಮಾಡುತ್ತಿದ್ದು ನಂತರ ನಾನು ಬ್ಯೂಸಿನೆಸ್ ಮಾಡುತ್ತಿದ್ದೆ. 1997 ರಲ್ಲಿ ನಾನು ಸ್ವದೇಶಕ್ಕೆ ಬಂದ ಬಗ್ಗೆ ದಾಖಲೆ ಇದೆಯಾ ಎಂದರೆ ಪಾಸ್ ಪೋರ್ಟ ಇದೆ ಎನ್ನುತ್ತಾರೆ. ಕ್ರಯಪತ್ರ ಆದ ದಿಃ 07.08.1997 ರಲ್ಲಿ ಇಂಡಿಯಾ ದಲ್ಲಿ ಇದ್ದ ಬಗ್ಗೆ ದಾಖಲೆ ಹಾಜರು ಪಡಿಸಲು ತೊಂದರೆ ಇಲ್ಲ. ಪಾಸ್ ಪೋರ್ಟ್ ಹಾಕಬಹುದು ಎನ್ನುತ್ತಾರೆ.

ಕ್ರಯ ಪತ್ರ ಆದ ದಿಃ 07.08.1997 ರಲ್ಲಿ ನಾನು ಇಂಡಿಯಾದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಈಗ ನಾನು ವಕೀಲರ ವೃತ್ತಿ ನಿರ್ವಹಿಸುತ್ತಿದ್ದೇನೆ. ನನ್ನ ಪ್ರಮಾಣ ಪತ್ರದಲ್ಲಿ ವ್ಯವಸಾಯ ಮಾಡುತ್ತಿದ್ದೇನೆ ಎಂದು ಬರೆಸಿದ್ದೇನೆ ಎಂದರೆ ಹೆಚ್.ಡಿ ಕೋಟೆಯಲ್ಲಿ ವ್ಯವಸಾಯ ಮಾಡುತ್ತಿದ್ದೇನೆ ಎಂದು ನುಡಿಯುತ್ತಾರೆ.

1996–97 ರಲ್ಲಿ ನನ್ನ ವಾರ್ಷಿಕ ಆದಾಯ ಅಂದಾಜು 3 ರಿಂದ 3 1/2 ಕೋಟಿ ಮೇಲೆ ಇತ್ತು. ಆ ಬಗ್ಗೆ ದಾಖಲೆ ನ್ಯಾಯಾಲಯಕ್ಕೆ ಹಾಜರು ಮಾಡಲು ತೊಂದರೆ ಇಲ್ಲ ಎಂದರೆ ಸಾಕ್ಷಿ ವಿದೇಶದಲ್ಲಿ ನಾನು ಇನ್ಕಮ್ ಟ್ಯಾಕ್ಸ್ (IT returns) ಫೈಲ್ ಮಾಡುತ್ತಿದ್ದೇನೆ ಎನ್ನುತ್ತಾರೆ. 1996–97 ರಲ್ಲಿ ನನಗೆ ಯಾವುದೆ ಆದಾಯ ಇಲ್ಲದಿದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೂಲತಃ ನಾನು ಜಮೀನುದಾರನಲ್ಲ ಎಂದರೆ ಸರಿಯಲ್ಲ. 1997 ಕ್ಕೂ ಮೊದಲು ಖರೀದಿ

ಮಾಡಲು ನನ್ನ ಹೆಸರಿನಲ್ಲಿ ಜಮೀನು ಇರುವ ಬಗ್ಗೆ ದಾಖಲೆ ಹಾಜರು ಪಡಿಸಲು ನನಗೆ ಯಾವುದೆ ತೊಂದರೆ ಇಲ್ಲ. 1997 ಕ್ಕೂ ಪೂರ್ವದಲ್ಲಿ ನಾನು ಯಾವುದೆ ಜಮೀನು ಖರೀದಿ ಮಾಡಿಲ್ಲ ಎಂದರೆ ನಾನು ಸದರಿ ಇಂಡಿಯಾದಲ್ಲಿ ತೆಗೆದುಕೊಂಡಿಲ್ಲ, ವಿದೇಶದಲ್ಲಿ ತೆಗೆದುಕೊಂಡಿದ್ದೇನೆ. ಪ್ರಪ್ರಥಮ ಬಾರಿ ಚಿಕ್ಕಾಡನಹಳ್ಳಿ ಯಲ್ಲಿ 30 ಎಕರೆ ಜಮೀನು ತೆಗೆದುಕೊಂಡಿದ್ದೆ ಎಂದರೆ ಸರಿ. ಕ್ರಯ ಪತ್ರದಲ್ಲಿ ತೋರಿಸಿರುವ ಮಾರಾಟಗಾರರೆಲ್ಲರೂ ಅನಕ್ಷರಸ್ಥರು ಎಂದರೆ ಅದರ ಬಗ್ಗೆ ನನಗೆ ಮಾಹಿತಿ ಇಲ್ಲ. 1997 ರಲ್ಲಿ ಚಿಕ್ಕಾಡನಹಳ್ಳಿಯಲ್ಲಿ 30 ಎಕರೆ ಜಮೀನು ಖರೀದಿಗೆ ಇದೆ ಎಂದು ಪ್ರಕಾಶ್ ಎಂಬುವವರು ತೋರಿಸಿದ್ದಾರೆ ಎನ್ನುತ್ತಾರೆ. ಸದರಿ ಪ್ರಕಾಶ್ ರವರು ಇರಬಹುದು ಆದರೆ ನನ್ನ ಸಂಪರ್ಕದಲ್ಲಿ ಇಲ್ಲ. ಅವರನ್ನು ನ್ಯಾಯಾಲಯಕ್ಕೆ ಸಾಕ್ಷಿದಾರರನ್ನಾಗಿ ಮಾಡಲು ತೊಂದರೆ ಇಲ್ಲ ಎಂದರೆ ನನ್ನ ಸಂಪರ್ಕದಲ್ಲಿ ಇಲ್ಲ ಎನ್ನುತ್ತಾರೆ. ಪ್ರಕಾಶ್ ರವರು ಜಮೀನು ತೋರಿಸಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

1997 ರಲ್ಲಿ ಜಮೀನು ಖರೀದಿಗೂ ಮೊದಲು ಕ್ರಯ ಪತ್ರ ಆಗುವವರೆಗೆ ಸುಮಾರು 1 ತಿಂಗಳು ಆಗಿಬಹುದು. ಸಾಕ್ಷಿ ಪುನಃ ಮಾರಾಟ ಗಾರರ ಸದರಿ ಜಮೀನು ಮಾರಾಟ ಮಡಲು ಮುಂದಾಗಿದ್ದು, ಜಮೀನಿನ ಅಲಿನೇಶನ್ ಅದ ನಂತರ ತೆಗೆದುಕೊಳ್ಳವುದಾಗಿ ತಿಳಿಸಿದ ಮೇರೆಗೆ ಅದನ್ನು ಮುಗಿಸಿದ ನಂತರ ನಾನು ಖರೀದಿ ಮಾಡಿರುತ್ತೇನೆ. ಅಲಿನೇಶನ್ ಆದ 1 ದಿನ 2 ದಿನ 3 ದಿನದ ನಂತರ ಈ ಜಮೀನು ಖರೀದಿ ಮಾಡಿರುತ್ತೇನೆ. 5-6 ಸರ್ವೆ ನಂ. ಗಳಲ್ಲಿ ಜಮೀನು ಖರೀದಿ ಮಾಡಿದ್ದು, ಯಾವ ಸರ್ವೆ ನಂ. ಮೊದಲು ಖರೀದಿ ಮಾಡಿದ್ದೇನೆ ಎಂದು ಈಗ ನನಗೆ ನೆನಪಿಲ್ಲ. ಕ್ರಯಕ್ಕೆ ಪಡೆಯುವ ಪೂರ್ವದಲ್ಲಿ ಅರ್.ಟಿ.ಸಿ, ಎಂ.ಆರ್ ಮತ್ತು ಅಲಿನೇಶನ್ ಪ್ರತಿಗಳನ್ನು ಮಾರಾಟಗಾರರಿಗೆ ಸ್ವತ್ತು ಹೇಗೆ ಬಂದಿತ್ತು ಎಂಬ ಬಗ್ಗೆ ದಾಖಲೆಗಳನ್ನು ನೋಡಿರುತ್ತೇನೆ. ಮಾರಾಟಗಾರರ ಕುಟುಂಬದ ಸದಸ್ಯರಲ್ಲಿ ವಿಚಾರಿಸಿಲ್ಲ. ಜಮೀನು ಖರೀದಿ ಮಾಡುವ ಪೂರ್ವದಲ್ಲಿ

ನಮ್ಮ ಸಿಬ್ಬಂದಿರವರ ಮೂಲಕ ವಕೀಲರಲ್ಲಿ ಅಭಿಪ್ರಾಯ ಪಡೆದುಕೊಂಡಿದ್ದೇನೆ. ಈ ಜಮೀನು ಖರೀದಿಗೂ ಮುಂಚೆ ಪತ್ರಿಕಾ ಪ್ರಕಟಣೆಯನ್ನು ನಾನು ಮಾಡಿಸಿಲ್ಲ.

ನೇರವಾಗಿ ಕ್ರಯ ಪತ್ರ ಮಾಡಿಕೊಳ್ಳುವ ಪೂರ್ವದಲ್ಲಿ ಸ್ವಲ್ಪ ಸಮಯ ವಿದೇಶದಿಂದ ಬಂದಿದ್ದರಿಂದ ನೇರವಾಗಿ ಕ್ರಯ ಪತ್ರ ಮಾಡಿಕೊಂಡೆ ಎನ್ನುತ್ತಾರೆ. ದಾವಾ ಸ್ವತ್ತು ವಾದಿಗಳ ತಂದೆ ಹಲಗಯ್ಯ ಅಲಿಯಾಸ್ ಪಾಪಯ್ಯ ಬಿನ್ ಕೆಂಪರಸಿ ರವರ ಪಿತ್ರಾರ್ಜಿತ ಆಸ್ತಿ ಎಂದರೆ ಸರಿ. ನಿಪಿ. 1 ರ ಅರ್ ಆರ್ ಪ್ರತಿಯಲ್ಲಿ ಸರ್ವೆ ನಂ. 50 ಗೆ ಹಲಗಯ್ಯ ಬಿನ್ ಕೆಂಪರಸಿ ಎಂದು ಇದೆ ಎಂದರೆ ಸರಿ. ನಿಪಿ. 2 ರ ಸರ್ವೆ ನಂ. 50 ರಲ್ಲಿ 2 ಎಕರೆ 30 ಗುಂಟೆ ಹಲಗಯ್ಯ ಬಿನ್ ಕೆಂಪರಸಿ ಎಂದು ಇದೆ ಎಂದರೆ ನಾನು ಕನರ್ವಷನ್ ಆದ ನಂತರ ಅದು ಅನ್ವಯಿಸುವುದಿಲ್ಲ ಎನ್ನುತ್ತಾರೆ. ನಾನು ಮತ್ತು 3 ನೇ ಪ್ರತಿವಾದಿ ಸೇರಿ ಸಿವಿಲ್ ನ್ಯಾಯಾಲಯದಲ್ಲಿ ಓ.ಎಸ್ 266/2019 ರಂತೆ ಹಲಗಯ್ಯ ಮತ್ತು ಅವರ ಮಕ್ಕಳ ಮೇಲೆ ಇನ್ಜೆಕ್ಷನ್ ದಾವೆ ಸಲ್ಲಿಸಿದ್ದೇವೆ ಎಂದರೆ ಸರಿ. ದಿಃ 07.08.1997 ರ ಕ್ರಯ ಪತ್ರದಲ್ಲಿ ಮಾರಾಟಗಾರರ ಹೆಸರುಗಳನ್ನು ಸೇರಿಸಿಲ್ಲ ಎಂದರೆ ಖಾತೆಯಲ್ಲಿ ಅವರ ಹೆಸರು ಇಲ್ಲದ ಕಾರಣ ಸೇರಿಸಿಲ್ಲ ಎನ್ನುತ್ತಾರೆ.

2019 ರಲ್ಲಿ ಅಸಲು ದಾವೆ ಹಾಕಿದ್ದು, ಆಗಲೂ ಕೂಡ ವಾದಿಗಳು ದಾವಾ ಷಡ್ಯೂಲ್ ಸ್ವತ್ತಿನ ಸ್ವಾಧೀನದಲ್ಲಿ ಇದ್ದರು ಎಂದರೆ ಸರಿಯಲ್ಲ. ನಿಡಿ. 1 ರ ಅಸಲು ಕ್ರಯ ಪತ್ರ ಕರ್ನಾಟಕ ಬ್ಯಾಂಕ್, ಚಾಮುಂಡಿಪುರ, ಮೈಸೂರು ಶಾಖೆಯಲ್ಲಿ ಇದ್ದ ಕಾರಣ ಅದನ್ನು ಹಾಜರು ಪಡಿಸಿಲ್ಲ.ಅಂದಾಜು 2014-15 ಲ್ಲಿ ಬ್ಯಾಂಕ್ ನಲ್ಲಿ ಪ್ಲೆಜ್ಡ್ ಮಾಡಿರುತ್ತೇನೆ. ಪ್ರಮಾ ಣಪತ್ರದಲ್ಲಿ ಪ್ಲೆಜ್ಡ್ ಮಾಡಿದ ಬಗ್ಗೆ ಹೇಳಿದ್ದೇನೆ ಎಂದರೆ ನನಗೆ ನೆನಪಿಲ್ಲ. ದಿಃ 07.08.1997 ರ ಕ್ರಯ ಪತ್ರವನ್ನು ಅದೆ ದಿನ ಟೈಪ್ ಮಾಡಿಸಿಲ್ಲ. ಸುಮಾರು ಎಷ್ಟು ದಿನಗಳ ಹಿಂದೆ ಮಾಡಿಸಲಾಗಿತ್ತು ಎಂದು ಈಗ ನನಗೆ ನೆನಪಿಲ್ಲ. ನಿಡಿ. 1 ಅನ್ನು ಮಾರಾಟಗಾರರೇ ತಯಾರು ಮಾಡಿಸಿದ್ದರು. ನಿಡಿ. 1 ಅನ್ನು ಟೈಪ್ ಮಾಡಿಸಿದ್ದು, ಮಾರಾಟ

ಗಾರರಲ್ಲ ನಾನೇ ಟೈಪ್ ಮಾಡಿಸಿದ್ದು ಎಂದರೆ ಸರಿಯಲ್ಲ. ಮಾರಾಟ ಗಾರರ ಪರವಾಗಿ ಪ್ರಕಾಶ್ ರವರು ನಿಡಿ. 1 ಕ್ರಯ ಪತ್ರವನ್ನು ತಯಾರು ಮಾಡಿಸಿದ್ದರು. ನಾನು ಮತ್ತು ಪ್ರಕಾಶ್ ರವರು ಸೇರಿಕೊಂಡು ಮಾರಾಟಗಾರರಿಗೆ ಮೋಸ ಮಾಡುವ ಉದ್ದೇಶದಿಂದ ನಿಡಿ. 1 ಅನ್ನು ಇಂಗ್ಲೀಷ್ ನಲ್ಲಿ ತಯಾರು ಮಾಡಿಸಿದ್ದೇವೆ ಎಂದರೆ ಸರಿಯಲ್ಲ. ದಿ. 07.08.1997 ರಂದು ಸಬ್ ರಿಜಿಸ್ಟ್ರಾರ್ ಕಛೇರಿಗೆ ಎಷ್ಟು ಹೊತ್ತಿಗೆ ಹೋಗಲಾಯಿತು ಎಂದು ಈಗ ನೆನಪಿಲ್ಲ ಸಾಮಾನ್ಯವಾಗಿ ಬೆಳಿಗ್ಗೆ ಹೋಗಿರಬಹುದು.

ಮೊದಲನೇ ಮಾರಾಟಗಾರರಾದ ಚನ್ನಮ್ಮನ ಹೆಬ್ಬೆಟ್ಟಿನ ಗುರುತು ಕಾಣುವುದಿಲ್ಲ. ಅದು ದೃಡೀಕೃತ ಪ್ರತಿಯಾದ ಕಾರಣ ಕಾಣಿಸುತ್ತಿಲ್ಲ. ನಿಡಿ. 1 ರ ಕ್ರಯ ಪತ್ರದಲ್ಲಿ ಚನ್ನಮ್ಮನ ಹೆಬ್ಬೆಟ್ಟಿನ ಗುರುತೇ ಇಲ್ಲ ಎಂದರೆ ಸರಿಯಲ್ಲ. ಕಾಳಯ್ಯ ಎಂಬುವವರ ಸಹಿ ಕೂಡ ಸ್ಪಷ್ಟವಾಗಿ ಕಾಣಿಸುತ್ತಿಲ್ಲ ಎಂದರೆ ನನಗೆ ಸರಿಯಾಗಿ ಕಣ್ಣು ಕಾಣಿಸುತ್ತಿಲ್ಲವಾದ ಕಾರಣ ಸೃಷ್ಟವಾಗಿ ಕಾಣಿಸುತ್ತಿಲ್ಲ ಎನ್ನುತ್ತಾರೆ. ಕ್ರಯ ಪತ್ರದಲ್ಲಿ ಕಾಳಯ್ಯ ಎಂದು ಸಹಿ ಮಾಡಿಸಿದ್ದು, ಅವರು ಯಾರ ಮಗ, ಎಷ್ಟು ವಯಸ್ಸಿನವರು ಎಂದು ನಮೂದು ಇಲ್ಲ ಎಂದರೆ ಸರಿ, ಆದರೆ ನಾನು ತಯಾರು ಮಾಡಿಸಿಲ್ಲ ಎನ್ನುತ್ತಾರೆ. ಸದರಿ ಕ್ರಯ ಪತ್ರದಲ್ಲಿರುವ ಚನ್ನಮ್ಮನ ಸಹಿ ಮೂಲ ಚನ್ನಮ್ಮನ ಸಹಿ ಇಲ್ಲ ಅದನ್ನು ಸೃಷ್ಟಿಸಿಕೊಳ್ಳಲಾಗಿದೆ ಎಂದರೆ ಸರಿಯಲ್ಲ. ಅದೆ ರೀತಿ ಕಾಳಯ್ಯ ಎಂಬುವವರ ಸಹಿ ಕೂಡ ಸರ್ವೆ ನಂ. 50 ರಲ್ಲಿ ನಮೂದಿಸಿರುವ ಸದರಿ ಕಾಳಯ್ಯ ನವರ ಸಹಿ ಅಲ್ಲ ಎಂದರೆ ಸರಿಯಲ್ಲ.

1997 ರಲ್ಲಿ ಕನ್ವೆನ್ಷನ್ ಅದ ಜಮೀನಿನ ಬೆಲೆ ಎಷ್ಟು ಇತ್ತು ಎಂದರೆ ನಾವು ಎಷ್ಟು ಕೊಟ್ಟಿದ್ದೆವು ಅಷ್ಟು ಇತ್ತು ಎನ್ನುತ್ತಾರೆ. ಕ್ರಯ ಪತ್ರದಲ್ಲಿರುವ ತೋರಿಸುವ ವ್ಯಾಲ್ಯೂ ಸಬ್ ರಿಜಿಸ್ಟರ್ ವ್ಯಾಲ್ಯೂ ಆಗಿರುತ್ತದೆ. 1997 ರಲ್ಲಿ ಸಬ್ ರಿಜಿಸ್ಟರ್ ವ್ಯಾಲ್ಯೂ ಎಷ್ಟು ಇತ್ತು ಎಂಬ ಬಗ್ಗೆ ತೋರಿಸಲು ದಾಖಲೆ ಹಾಜರು ಪಡಿಸಬಹುದು ಎಂದರೆ ಸಾಕ್ಷಿ ಮಾರ್ಕೆಟ್ ವ್ಯಾಲ್ಯೂ ಮತ್ತು ಸಬ್ ರಿಜಿಸ್ಟರ್ ವ್ಯಾಲ್ಯೂ ಎರಡೂ ಹೆಚ್ಚು ವ್ಯತ್ಯಾಸ ಇರಲಿಲ್ಲ ಎನ್ನುತ್ತಾರೆ. ನಮ್ಮ ಕ್ರಯ ಪತ್ರದ 7 ನೇ ಪುಟದಲ್ಲಿ 20 ಸಾವಿರ ಹಣ

ಸಂದಾಯವಾಗಿದೆ ಎಂದು ಹೇಳಿದ್ದು, ಕಾಳಯ್ಯ ಮತ್ತು ಚನ್ನಮ್ಮ ಇಬ್ಬರಲ್ಲಿ ಯಾರಿಗೆ ಕೊಟ್ಟಿದ್ದು ಎಂದರೆ ಇಬ್ಬರದ್ದೂ ಹೆಸರು ಇದ್ದು ಯಾರಿಗೆ ಕೊಡಲಾಗಿದೆ ಎಂದು ಈಗ ಜ್ಞಾಪಕ ಇಲ್ಲ. ಪ್ಯಾರಾ ನಂ. 7ರ 7 ಎ ಯಿಂದ ಸಿ ವರೆಗಿನ 20, 30 ಮತ್ತು 20 ಸಾವಿರ ರೂ.ಗಳನ್ನು ನಿಖರವಾಗಿ ಯಾರಿಗೆ ಕೊಡಲಾಗಿತ್ತು ಎಂದರೆ ಅವರು ಒಟ್ಟಾಗಿ ಬಂದಿದ್ದ ಕಾರಣ ಹಾಗೆ ಬರೆಯಲಾಗಿದೆ ಎನ್ನುತ್ತಾರೆ. ನಮೂದಿಸಿರುವ ಚೆಕ್ ಅನ್ನು ಕಾಳಯ್ಯನವರಿಗೆ ಕೊಡಲಾತ್ತೊ ಅಥವಾ ಚನ್ನಮ್ಮನಿಗೆ ಕೊಡಲಾಗಿತ್ತೋ ಎಂದರೆ ನನಗೆ ನೆನಪಿಲ್ಲ. ವಾದಿಗಳು ಚನ್ನಮ್ಮ ನವರ ಹೆಸರಿನಲ್ಲಾಗಲಿ ಅಥವಾ ಕಾಳಯ್ಯ ನವರ ಹೆಸರಿಗೆ ಆಗಲಿ ಯಾವುದೆ ಖಾತೆ ಇರಲಿಲ್ಲ ಎಂದರೆ ಸರಿಯಲ್ಲ. ಚೆಕ್ ಮೂಲಕ 68, 750 ರೂ. ಮತ್ತು ನಗದಾಗಿ ಹಣ ಕೊಡಲಾಗಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 68,750 ಸಾವಿರ ರೂ. ನ ಚೆಕ್ಕು ನನ್ನ ಬ್ಯಾಂಕ್ ಖಾತೆಗೆ ಸಂಬಂಧಿಸಿದ್ದು. ನನ್ನ ಖಾತೆಯಿಂದ ಅವರ ಖಾತೆಗೆ ವರ್ಗಾವಣೆ ಆದ ಬಗ್ಗೆ ದಾಖಲೆಯನ್ನು ಹಾಜರು ಪಡಿಸಬಹುದು. ಆ ರೀತಿ ಯಾವುದೆ ದಾಖಲೆ ಇಲ್ಲ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕ್ರಯ ಪತ್ರದಲ್ಲಿ ಹೇಳಿರುವ ವಿಚಾರಗಳೆಲ್ಲವೂ ಸುಳ್ಳು ಎಂದರೆ ಸರಿಯಲ್ಲ. ನಿಡಿ. 1 ರ ಕ್ರಯ ಪತ್ರದಂತೆ ನಾನು ಮತ್ತು ನನ್ನ ಅಣ್ಣ ಇಬ್ಬರ ಹೆಸರಿನಲ್ಲೂ ಖರೀದಿ ಮಾಡಲಾಗಿತ್ತು. 1997 ರಲ್ಲಿ ಮಾಡುತ್ತಿದ್ದ ಸಹಿ ಅದೆ ರೀತಿ ಈಗ ಸಹಿ ಮಾಡುತ್ತಿಲ್ಲ, ಈಗ ವ್ಯತ್ಯಾಸ ಇದೆ.

ನಿಡಿ. 1 ರ ಕ್ರಯ ಪತ್ರದ ಪ್ರತಿ ಪುಟಗಳಲ್ಲಿ ನನ್ನ ಸಹಿ ಇಲ್ಲ ಎಂದರೆ ಸದರಿ ದಾಖಲೆಯಲ್ಲಿ ಇಲ್ಲ ಎನ್ನುತ್ತಾರೆ ಅದೆ ರೀತಿ ನನ್ನ ಅಣ್ಣ 3 ನೇ ಪ್ರತಿವಾದಿ ಸಹಿ ಇಲ್ಲ ಎಂದರೆ ಆಗ ನಾನೇ ಜಿ.ಪಿ.ಎ ಹೋಲ್ಡರ್ ಆಗಿದ್ದೆ. ಕ್ರಯ ಪತ್ರದಲ್ಲಿ ನಾನು 3 ನೇ ಪ್ರತಿವಾದಿ ಜಿ.ಪಿ.ಎ ಆಗಿ ಎಂದು ನಮೂದು ಇಲ್ಲ ಎಂದರೆ ಕ್ರಯಪತ್ರ ತಯಾರಿಸಿದವರು ನಮೂದು ಮಾಡಿಲ್ಲ ಎನ್ನುತ್ತಾರೆ. ಕ್ರಯ ಪತ್ರದಲ್ಲಿ ಸಾಕ್ಷಿದಾರರಾಗಿ ಕರೆದುಕೊಂಡು ಬಂದವರು ಮಾರಾಟಗಾರರ ಕಡೆಯವರು ಎನ್ನುತ್ತಾರೆ. ಸದರಿ ಕ್ರಯ ಪತ್ರದಲ್ಲಿ ಸಾಕ್ಷಿದಾರರು ಸಹಿ ಮಾಡಿಯೆ ಇಲ್ಲ ಎಂದರೆ ಸರಿಯಲ್ಲ. ಬಿಕ್ಲಂದಾರರು ಕೂಡ ಸದರಿ ದಾಖಲೆಗೆ ಸಹಿ

ಮಾಡಿಲ್ಲ ಎಂದರೆ ತಮ್ಮನ್ಣೇಗೌಡ ಎಂದು ಹೆಸರು ಇದೆ, ಅದೇ ಅವರ ಸಹಿ ಎಂದು ನನಗೆ ಹೇಳಲು ಬರುವುದಿಲ್ಲ.

**ಮುಂದುವರೆದ ಪಾಟೀ ಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದು, ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಭಾಗ್ಯಮ್ಮ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.